969 (1276) ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ ಕ್ಷೇತ್ರ) : ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಾಂಧಿನಗರ ವಿಧಾನಸಭಾ ಕ್ಷೇತ್ರದಲ್ಲಿ ಬಿಪಿಎಲ್ ಪಡಿತರ ಚೀಟಿಗಾಗಿ ಕೋರಿ ಸಲ್ಲಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು ಹಾಗೂ ನೀಡಲಾದ ಹೊಸ ಬಿಪಿಎಲ್ ಪಡಿತರ ಚೀಟಿಗಳ ಸಂಖ್ಯೆಗಳೆಷ್ಟು (ಕಳೆದ 3 ವರ್ಷಗಳ ವಾರ್ಡ್‌ವಾರು ವಿವರ ಒದಗಿಸುವುದು);

ಆ) ಬಡತನ ರೇಖೆಗಿಂತ ಕೆಳಗಿರುವವರ ಕೆಲವು ಕುಟುಂಬಗಳಿಗೆ ಬಡತನ ರೇಖೆಗಿಂತ ಮೇಲಿರುವ (ಎಪಿಎಲ್) ಕಾರ್ಡ್‌ನ್ನು ವಿತರಿಸಲಾಗಿರುವುದೇ; ಹಾಗಿದ್ದಲ್ಲಿ, ಇದನ್ನು ಸರಿಪಡಿಸಲು ತೆಗೆದು ಕೊಂಡ ಕ್ರಮಗಳೇನು;

ಇ) ಹೊಸ ಪಡಿತರ ಚೀಟಿಯನ್ನು ಕೋರಿ ಅರ್ಜಿ ಸಲ್ಲಿಸಿದ ಎಷ್ಟು ದಿನದಲ್ಲಿ ಪಡಿತರ ಚೀಟಿಯನ್ನು ವಿತರಿಸಲಾಗುವುದು; ಇಲಾಖೆಯಿಂದ ವಿಳಂಬವಾಗದಂತೆ ವಿತರಿಸಲು ತೆಗೆದುಕೊಂಡ ಕ್ರಮಗಳಾವುದು?

ಶ್ರೀ ಹೆಚ್. ಹಾಲಪ್ಪ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ) 2007ನೇ ಸಾಲಿನಿಂದ ವಿತರಿಸಲಾದ ಬಿಪಿಎಲ್ ಪಡಿತರ ಚೀಟಿಗಳ ವಿವರ ಈ ಕೆಳಕಂಡಂತಿದೆ.

ವಾರ್ಡ್ ಸಂ.	ಸ್ವೀಕೃತ ಅರ್ಜಿಗಳ ಸಂ.	ವಿತರಿಸಲಾದ ಬಿಪಿಎಲ್ ಪ.ಚೀ. ಗಳ ಸಂ.
25	413	291
26	941	613
27	380	273
28	113	66
29	652	58
ಒಟ್ಟು	**2499**	**1301**

ಆ) ಇಲ್ಲ.

ಅನ್ವಯಿಸುವುದಿಲ್ಲ.

ಇ) ಅರ್ಜಿ ಸ್ವೀಕೃತವಾದ 30 ದಿನಗಳ ಒಳಗಾಗಿ ಪಡಿತರ ಚೀಟಿಯನ್ನು ವಿತರಿಸಲಾಗುವುದು.

ಸ್ವೀಕೃತವಾದ ಅರ್ಜಿಯನ್ನು ಆಹಾರ ನಿರೀಕ್ಷಕರ ಮುಖಾಂತರ ಸ್ಥಳ ಪರಿಶೀಲನೆ ನಡೆಸಿ ಕ್ರಮಬದ್ಧವಾಗಿದ್ದಲ್ಲಿ ಅರ್ಹ ಪಡಿತರ ಚೀಟಿಯನ್ನು ನಿಗದಿತ ಅವಧಿಯೊಳಗಾಗಿ ವಿತರಿಸಲು ಕ್ರಮ ವಹಿಸಲಾಗುವುದು.

ಯಶಸ್ವಿನಿ ಸ್ವಯಂ ನಿಧಿ ಶಸ್ತ್ರ ಚಿಕಿತ್ಸೆ ಯೋಜನೆ

970 (1506) ಶ್ರೀ ಡಾ/ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಶಸ್ವಿನಿ ಸ್ವಯಂನಿಧಿ ಶಸ್ತ್ರ ಚಿಕಿತ್ಸೆ ಯೋಜನೆಯ ಅನುಷ್ಠಾನ ಏಜೆನ್ಸಿ ಯಾವುದು;

ಆ) ಅನುಷ್ಠಾನ ಏಜೆನ್ಸಿತ ಅವಧಿ ಎಷ್ಟು; ಇದರ ಜವಾಬ್ದಾರಿಗಳೇನು;

ಇ) ಯಾವ್ಯಾವ ಹಂತದ ಸಿಬ್ಬಂದಿಯನ್ನು ಈ ಸಂಸ್ಥೆ ನೇಮಿಸಿದೆ; ಅವರ ಕರ್ತವ್ಯಗಳೇನು;

ಈ) ಅನುಷ್ಠಾನ ಏಜೆನ್ಸಿಗೆ ಸಂದಾಯ ಮಾಡುವ ಮೊತ್ತವೆಷ್ಟು?

ಶ್ರೀ ಲಕ್ಷ್ಮಣ ಸವದಿ (ಸಹಕಾರ ಸಚಿವರು) :

ಅ) ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಯೋಜನೆಯ ಅನುಷ್ಠಾನವನ್ನು ನೋಡಿಕೊಳ್ಳಲು ಭಾರತೀಯ ವಿಮಾ ನಿಯಂತ್ರಣ ಪ್ರಾಧಿಕಾರದಿಂದ ಲೈಸನ್ಸ್ ಹೊಂದಿರುವ ಮೆ. ಪ್ಯಾಮಿಲಿ ಹೆಲ್ತ್ ಪ್ಲಾನ್ ಲಿಮಿಟೆಡ್ ಹೈದರಾಬಾದ್, ಈ ಕಂಪನಿಯನ್ನು ಅನುಷ್ಠಾನ ಏಜೆನ್ಸಿಯೆಂದು ನೇಮಕ ಮಾಡಲಾಗಿರುತ್ತದೆ.

ಆ) ಮೆ. ಪ್ಯಾಮಿಲಿ ಹೆಲ್ತ್ ಪ್ಲಾನ್ ಲಿಮಿಟೆಡ್ ಹೈದರಾಬಾದ್, ಈ ಕಂಪನಿಯನ್ನು ಅನುಷ್ಠಾನ ಏಜೆನ್ಸಿಯಾಗಿ ದಿ: 01.06.2007 ರಿಂದ 31.05.2009ರವರೆಗೆ ಎರಡು ವರ್ಷಗಳಿಗೆ ನೇಮಕ ಮಾಡಲಾಗಿದ್ದು, ಮತ್ತೆ ಒಂದು ವರ್ಷದ ಅವಧಿಗೆ ಅಂದರೆ ದಿ: 01.06.2009 ರಿಂದ ದಿ: 31.05.2010ರವರೆಗೆ ಮುಂದುವರೆಸಲಾಗಿದೆ.

ಅನುಷ್ಠಾನ ಏಜೆನ್ಸಿಯು ರಾಜ್ಯಾದ್ಯಾಂತ ಟ್ರಸ್ಟ್‌ನಿಂದ ಗುರುತಿಸಲ್ಪಟ್ಟ ನೆಟ್‌ವರ್ಕ್ ಆಸ್ಪತ್ರೆಗಳ ಮೂಲಕ ಯಶಸ್ವಿನಿ ಯೋಜನೆಯನ್ನು ಕಾರ್ಯಗತ